ದಿನಾಂಕ 29-04-2024 ರಂದು ಸಾಕ್ಷಿಧಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

: ಪಾಟೀ ಸವಾಲುಃ  ವಾದಿ ಪರ ಶ್ರೀ.ಬಿ ಎಸ್ ಡಿ ವಕೀಲರಿಂದ :

ನನ್ನ ಕುಟುಂಬ ಎಂದರೆ ನನ್ನ ಗಂಡ ನನ್ನ ಮಗ ಮತ್ತು ನನ್ನ ಮಗಳು ಎಂದರೆ ಸರಿ. ನನ್ನ ಮಕ್ಕಳ ಮದುವೆ ಆಗಿರುವುದಿಲ್ಲ.  ಎಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದೇವೆ ಎಂದರೆ ಸರಿ. ಮನೆ ನಂಬರ **66** ಈ ಎಫ್ **2** ಅಂತಾ ಇರುತ್ತದೆ.  ನಮ್ಮ ಮನೆಯ ನಂಬರ **661/** ಈ /ಈಎಫ್ಎಫ್ ಎಂದರೆ ಇರಬಹುದು ನನಗೆ ನೆನಪಿಲ್ಲ. ನಮ್ಮ ಮನೆಯ **66** ಈ ಎಫ್ **2** ನಿಮ್ಮ ಮನೆಯ ನಂಬರ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮನೆಯನ್ನು **2006** ರಲ್ಲಿ ಜಾಗವನ್ನು ಖರೀದಿಸಿ ಮನೆಯನ್ನು ಕಟ್ಟಿರುತ್ತೇವೆ. ಅದೇ ದಿನ ನಮ್ಮ ತಂದೆಯು ಸಹ ಒಂದು ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಖರೀದಿ ಮಾಡಿದ ಜಾಗೆಯಲ್ಲಿ ಅವರು ಪ್ರತ್ಯೇಕವಾಗಿ ತಮ್ಮ ಮನೆಯನ್ನು ಕಟ್ಟಿಸಿದ್ದಾರೆ ಎಂದರೆ ಸರಿ ನಾವು ಪ್ರತ್ಯೇಕವಾಗಿ ಕಟ್ಟಿಸಿದ್ದೇವೆ ಎಂದರೆ ಸರಿ.

**2.** ಸದರಿ ಗಿಫ್ಟ ನ್ನು ಯಾರು ಬರೆದರು ಎಂದು ಗೊತ್ತಿಲ್ಲ ನಮ್ಮ ತಂದೆಯವರು ಬರೆಯಿಸಿಕೊಂಡು ತಂದಿದ್ದರು. ಗಿಫ್ಟ ಮಾಡಿಸಿಕೊಳ್ಳಲು ಹೋದ ಸಮಯ ನೆನಪಿಲ್ಲ ಆದರೆ ಕರೆದುಕೊಂಡು ಹೋಗಿದ್ದರು. ಗಿಫ್ಟ್ ನ್ನು ಮಾಮಲೇದಾರ ಆಫೀಸ್ ನಲ್ಲಿ ಮಾಡಿಸಿದ್ದಾರೆ. ನನ್ನ ತಂದೆ ಗಿಫ್ಟ್ ಬರೆಯಲು ಕಾಗದವನ್ನು ತಂದಿದ್ದರು. ಕಾಗದವನ್ನು ಅದೇ ದಿನ ತಂದಿದ್ದರೋ ಇಲ್ಲವೋ ಎಂಬುದು ಗೊತ್ತಿಲ್ಲ. ನಿಡಿ-**2** ನ್ನು ಸಾಕ್ಷಿಗೆ

ತೋರಿಸಲಾಗಿ ಸಾಕ್ಷಿಯು ತನ್ನ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ 3 ಸಹಿಗಳನ್ನು ನಿಪಿ-6 ರಿಂದ 8 ಅಂತಾ ನಿಡಿ-2 ರಲ್ಲಿ ಗುರುತಿಸಲಾಯಿತು. ನಿಡಿ-2 ನ್ನು ತಯಾರಿಸಲು ಎಷ್ಟು ಗಂಟೆ ಬೇಕಾಯಿತು ಅಂತಾ ಹೇಳಲು ಬರುವುದಿಲ್ಲ. ನಮ್ಮ ಕುಟುಂಬಕ್ಕೆ ಪ್ರತ್ಯೇಕವಾಗಿ ಯಾರು ವಕೀಲರು ಇಲ್ಲ. ನನಗೆ ನಜೀಂ ಖಾನ ಮಡಗಾಂವ ವಕೀಲರ ಪರಿಚಯ ಇಲ್ಲ. ಅಸ್ಲಂ ರವರ ಪರಿಚಯ ಇಲ್ಲ. 3 ಜನ ಗಿಫ್ಟ್ ಕಾಲಕ್ಕೆ ಹಾಜರಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಬೇರೆ ಜನ ನನ್ನ ತಂದೆಯ ಜೊತೆಗೆ ಬಂದಿದ್ದರು ಅಂತಾ ನುಡಿಯುತ್ತಾರೆ. ಸಂಪೂರ್ಣ ನಿಡಿ-2 ರ ಪ್ರಕ್ರಿಯೆ ಮುಗಿಯಲು ಎಷ್ಟು ಸಮಯ ತೆಗೆದುಕೊಳ್ಳಲಾಯಿತು ಎಂದರೆ ನೆನಪಿಲ್ಲ.

3. ಆ ದಿನ ನನ್ನ ತಂದೆ ನನ್ನ ಜೊತೆಗೆ ಮನೆಗೆ ಬಂದರು. ನನ್ನ ತಂದೆಯ ಜೊತೆಗೆ ಇದ್ದ ಜನರು ಎಲ್ಲಿ ಹೋದರು ಎಂದು ನನಗೆ ಗೊತ್ತಿಲ್ಲ. ನಿಡಿ-2 ನ್ನು ನನ್ನ ಮಗನಿಗೆ ನನ್ನ ತಂದೆ ಮಾಡಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮಗನ ಪರವಾಗಿ ಗಿಫ್ಟ್ ನ್ನು ಸ್ವಿಕರಿಸುವ ಅಧಿಕಾರ ನನಗೆ ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯು ಯಾರ ಹೆಸರಿನಲ್ಲಿ ಇದೆ ಎಂದರೆ ನನ್ನ ತಂದೆಯವರ ಹೆಸರಿನಲ್ಲಿ ಇದೆ. ಈಗ ನನ್ನ ಮಗನ ಹೆಸರಿನಲ್ಲಿದೆ. ಅದು ಯಾವಾಗ ದಾಖಲಾಯಿತು ಆಯಿತು ಎಂದರೆ ಅವನು 18 ವರ್ಷ ಆದ ಮೇಲೆ ಆಗಿದೆ. ನನ್ನ ತಂದೆ ನನ್ನ ಮಗ 18 ವರ್ಷ ಗುವ ಪೂರ್ವದಲ್ಲಿ ಮರಣ ಹೊಂದಿದ್ದರಿಂದ ನನ್ನ ಮಗ 18 ವರ್ಷ ಆದ ಮೇಲೆ ಸದರಿ ಆಸ್ತಿಯನ್ನು ಸ್ವಿಕರಿಸಲು ಬರುವುದಿಲ್ಲ ಮತ್ತು ಅವನಿಗೆ ಅಧಿಕಾರ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಕಾನೂನು ಬಾಹಿರವಾದ ಗಿಫ್ಟ್ ನ್ನು ನನ್ನ ಮಗನ ಹೆಸರಿನಲ್ಲಿ ದಾಖಲಿಸಿ ಸುಳ್ಳು ಹಕ್ಕನ್ನು ಸಾಧಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ಮರಣದ ನಂತರ ವಾದಿಯವರಿಗೆ ಮತ್ತು ನನಗೆ ಕಾನೂನು ಬದ್ಧವಾದ ಸದರಿ ಆಸ್ತಿಯಲ್ಲಿ ಹಕ್ಕು ಬರುತ್ತದೆ ಎಂದರೆ ಸರಿಯಲ್ಲ.

: ಮರುವಿಚಾರಣೆ : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್